# ‘ಲಾ’ ಹುಡುಗಿಯ ನಟನೆಯ ಸವಾಲು



**ರಾಗಿಣಿ ಚಂದ್ರನ್ ಮಾಡೆಲಿಂಗ್ ಮತ್ತು ಡಾನ್ಸ್ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ತೊಡಗಿಕೊಂಡವರು. ಈಗ ನಟರ ಕುಟುಂಬದ ಜೊತೆಗಿನ ನಂಟು ಅವರನ್ನು ನಟನೆಗೆ ಅಂಟಿಸಿದೆ. ಅವರು ನಾಯಕಿಯಾಗಿ ನಟಿಸಿರುವ ಮೊದಲ ಸಿನಿಮಾ ‘ಲಾ’ ಜುಲೈ 17ಕ್ಕೆ ಒಟಿಟಿಯಲ್ಲಿ ಬಿಡುಗಡೆಯಾಗಲಿದೆ.**

■ **ಪದ್ಮನಾಭ ಭಟ್**

‘ನಟಿಯಾಗಿ ಜನಪ್ರಿಯತೆ ಗಳಿಸಬೇಕು ಎಂದು ನಾನು ಕನಸು ಕಂಡವಳಲ್ಲ. ಈಗಲೂ ನನಗೆ ಆ ಕನಸಿಲ್ಲ. ಬದುಕಿನ ದಾರಿಯಲ್ಲಿ ಅಚಾನಕ್ಕಾಗಿ ರಘು ಸಮರ್ಥ ನಿರ್ದೇಶನದ ‘ಲಾ’ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು. ನಟಿಸಿದೆ. ಮುಂದೆಯೂ ಇಂಥ ಒಳ್ಳೆಯ ಅವಕಾಶಗಳು ಸಿಕ್ಕರೆ ನಟಿಸುತ್ತೇನೆ. ಇಲ್ಲದಿದ್ದರೆ ಏನೂ ಬೇಸರವಿಲ್ಲ. ಐ ಆ್ಯಮ್ ವೆರಿ ಪ್ರೌಡ್ ಹೋಮ್ ಮೇಕರ್. ಗೃಹಿಣಿಯಾಗಿ ಖುಷಿಯಿಂದಲೇ ಇರುತ್ತೇನೆ. ಅದನ್ನು ಬಿಟ್ಟರೆ ನನ್ನದೇ ಒಂದು ಸ್ಟುಡಿಯೊ ಇದೆ. ಡಾನ್ಸರ್ ಕೂಡ ಹೌದು. ಹಾಗಾಗಿ ನಟನೆ ನನ್ನ ಬದುಕಿನ ಹಲವು ಆಸಕ್ತಿಗಳಲ್ಲಿ ಒಂದು ಅಷ್ಟೆ’ – ಇಷ್ಟು ಸ್ಪಷ್ಟವಾಗಿ ಮಾತಾಡುವ ರಾಗಿಣಿ ಚಂದ್ರನ್ ನಟನೆಗೆ ಬರುವುದಕ್ಕಿಂತ ಮುಂಚೆನಿಂದಲೂ ಮಾಡೆಲಿಂಗ್ ಕ್ಷೇತ್ರದಲ್ಲಿ ಸಕ್ರಿಯಳಾಗಿದ್ದವರು. ‘ನನ್ನ ಎಲ್ಲ ಆಸಕ್ತಿಗಳಲ್ಲಿ ಡಾನ್ಸ್‌ಗೆ ಮೊದಲ ಪ್ರಾಶಸ್ತ್ಯ’ ಎನ್ನುವ ರಾಗಿಣಿ ಅವರಿಗೆ ಹದಿನೈದು ವರ್ಷಗಳ ಕಾಲ ನಿರುಪಮಾ ರಾಜೇಂದ್ರ ಅವರ ನೃತ್ಯತಂಡದಲ್ಲಿ ಕೆಲಸ ಮಾಡಿದ ಅನುಭವವೂ ಇದೆ.

ಈಗಾಗಲೇ ನೃತ್ಯ ಮತ್ತು ಮಾಡೆಲಿಂಗ್ ಮೂಲಕ ತಮ್ಮ ಅಸ್ಮಿತೆಯನ್ನು ಕಂಡುಕೊಂಡಿದ್ದ ಅವರ ಪರಿಚಯಪತ್ರಕ್ಕೆ, ನಟ ಪ್ರಜ್ವಲ್ ದೇವರಾಜ್ ಅವರನ್ನು ಮದುವೆಯಾಗುವುದರೊಂದಿಗೆ ಹೊಸದೊಂದು ಸಾಲು ಸೇರ್ಪಡೆಯಾಗಿದೆ. ರಾಗಿಣಿ ಈಗ ಕಲಾವಿದರ ಕುಟುಂಬದ ಮುದ್ದಿನ ಸೊಸೆ.

ಸಾಮಾನ್ಯವಾಗಿ ಸಿನಿಮಾರಂಗದಲ್ಲಿ ಮದುವೆಯಾದರೆ ಆ ನಟಿಯ ನಟನಾಜೀವನ ಮುಗಿಯಿತು ಎಂದೇ ಭಾವಿಸಲಾಗುತ್ತದೆ. ಆದರೆ ರಾಗಿಣಿ ವಿಷಯದಲ್ಲಿ ಇದು ಉಲ್ಟಾ. ಮದುವೆಯಾದ ಮೇಲೆಯೇ ಅವರ ನಟನಾಜೀವನ ಶುರುವಾಗಿದೆ. ಇದರ ಕುರಿತು ಅವರಿಗೆ ಸಾಕಷ್ಟು ಹೆಮ್ಮೆಯೂ ಇದೆ.

‘ಈ ವಿಷಯದಲ್ಲಿ ನಾನು ತುಂಬಾ ಲಕ್ಕಿ. ನನ್ನ ಅಪ್ಪ–ಅಮ್ಮ ನನ್ನ ಆಸಕ್ತಿಯನ್ನು ಗುರ್ತಿಸಿ ಸಾಕಷ್ಟು ಪ್ರೋತ್ಸಾಹ ಕೊಟ್ಟಿದ್ದರು. ಈಗ ನನ್ನ ಅತ್ತೆ–ಮಾವ, ಪ್ರಜ್ವಲ್ ಎಲ್ಲರೂ ಅಷ್ಟೇ ಆಸ್ಥೆಯಿಂದ ನನ್ನ ಆಸಕ್ತಿಗಳನ್ನು ಪೋಷಿಸುತ್ತಿದ್ದಾರೆ. ಮದುವೆಗೂ ಮುನ್ನ ಮಾಡೆಲಿಂಗ್ ಮಾಡುತ್ತಿದ್ದೆ. ಮದುವೆಯ ನಂತರವೂ ಚೆನ್ನೈ, ಮುಂಬೈ ಮುಂತಾದ ಕಡೆಗಳಲ್ಲಿ ಹೋಗಿ ಮಾಡೆಲಿಂಗ್ ಮಾಡಿ ಬಂದಿದ್ದೇನೆ. ‘ಲಾ’ ಸಿನಿಮಾದ ಕಥೆಯನ್ನು ಪ್ರಜ್ವಲ್ ಕೂಡ ಕೇಳಿ ತುಂಬ ಇಷ್ಟಪಟ್ಟರು’ ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಈ ಮೊದಲೂ ಅವರಿಗೆ ಹಲವು ಬಾರಿ ಸಿನಿಮಾಗಳಲ್ಲಿ ನಟಿಸುವ ಅವಕಾಶ ಬಂದಿತ್ತು. ಆದರೆ ಡಾನ್ಸ್‌ನಲ್ಲಿ ಬ್ಯುಸಿಯಾಗಿದ್ದ ಅವರು ಚಿತ್ರೀಕರಣಕ್ಕಾಗಿ ಹೆಚ್ಚಿನ ದಿನಗಳನ್ನು ಮೀಸಲಿಡುವುದು ಅಸಾಧ್ಯ ಎಂಬ ಕಾರಣಕ್ಕೆ ನಟನೆಗೆ ಒಲ್ಲೆ ಎಂದಿದ್ದರು. ಈ ಸಿನಿಮಾದ ಕಥೆಯೇ ಅವರನ್ನು ನಟನೆಗೆ ತೊಡಗಿಸಿಕೊಳ್ಳುವುದರಲ್ಲಿ ಪ್ರೇರೇಪಿಸಿದೆಯಂತೆ.

‘ಲಾ’ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ. ರಾಗಿಣಿಗೆ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾಗಳು ಅಂದರೆ ಇಷ್ಟವಂತೆ. ಅದರಲ್ಲಿಯೂ ಈ ಚಿತ್ರದಲ್ಲಿ ಗಟ್ಟಿ ವ್ಯಕ್ತಿತ್ವದ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಪಾತ್ರವನ್ನು ಒಪ್ಪಿಕೊಳ್ಳಲು ಮತ್ತು ಇಷ್ಟಪಟ್ಟು ನಟಿಸಲು ಅವರಿಗೆ ಇನ್ನೂ ಹಲವು ಕಾರಣಗಳಿವೆ.

‘ನಾನು ಹಿಂಜರಿಕೆಯ ಹುಡುಗಿ ಅಲ್ಲ. ಡಿಪ್ಲೊಮೆಟಿಕ್ ಅಲ್ಲ. ನನಗನಿಸಿದ್ದನ್ನು ನೇರವಾಗಿ ಹೇಳುವವಳು. ತಪ್ಪು ಕಂಡಲ್ಲಿ ಖಂಡಿಸುವವಳು. ಈ